ಮುದ್ದತ್ತು ಠೇವು

೧	ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್	೩೦೦೦-೦೦
		೩೦೦೦-೦೦

ಸಂಕ್ಷಿಪ್ತ ಟಿಪ್ಪಣಿ

೧.	ಚಾಲತಿ ಖಾತೆ	ರೂ.	೧೦,೩೭೭-೯೭
೨.	ಉಳಿತಾಯ ಖಾತೆ	ರೂ.	೨,೪೬೪-೮೩
೩.	ಮುದ್ದತ್ತು ಠೇವು	ರೂ.	೩,೦೦೦-೦೦
	ಒಟ್ಟು ಮೊತ್ತ		೧೫,೪೪೨-೮೦

ಈ ಕೆಳಗೆ ಕಾಣಿಸಿದ ಪಂಚಾಯತಿ ದಾವಾ ಪ್ರಕರಣಗಳು ವಸೂಲಿ ಕುರಿತು ಮಾರಾಟ ಅಧಿಕಾರಿ ಬೆಳಗಾಂವಿ ಅವರ ಕಡೆಗೆ ಇರುತ್ತವೆ.

ಅ. ನಂ.	ಹೆಸರು		ರಖಂ
೧.	ಶ್ರೀ ಜಿ. ಎಂ. ಭಸೇಸಾ	ಸಂಕೇಶ್ವರ	೫೦೦-೦೦
೨.	ಶ್ರೀ ಎಸ್. ಎಸ್. ಸಂಸುದ್ದಿ	,,	೫೦೦೦-೦೦
೩.	ಶ್ರೀ ಎಸ್. ಸಿ. ಡಂಗ	,,	೧೦೦೦-೦೦
೪.	ಶ್ರೀ ವಿ. ಪಿ. ಕುರಾಡೆ	,,	೯೮೬-೦೦
೫.	ಶ್ರೀ ಎಸ್. ಎ. ಪಟ್ಟಣಶೆಟ್ಟಿ	,,	೧೧೪೧-೦೦
೬.	ಶ್ರೀ ಎಸ್. ಎನ್. ಸೌದಾಗರ	,,	೫೦೦೦-೦೦
೭.	ಶ್ರೀ ಎಸ್. ಎ. ಡಂಗ	,,	೧೦೦೦-೦೦
೮.	ಶ್ರೀ ಜಿ. ಎಂ. ಮಖ್ತಿಹೊಳಿಮಠ	,,	೪೪೫೫-೦೦
		ಒಟ್ಟು ರೂ.	೨೭೯೨-೦೦

ರಾಜ್ಯದಲ್ಲಿ ಹಿಂದೆ ಜಾರಿಯಲ್ಲಿದ್ದ ತಳವಾರ ಕುಳವಾಡಿ ಮತ್ತು ಶಾನುಭೋಗ ಹುದ್ದೆಗಳ ಬಗ್ಗೆ

೧೦೮ (೮೬) ಶ್ರೀ ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ).—ಮಾನ್ಯ ಕಂದಾಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ರಾಜ್ಯದಲ್ಲಿ ಈ ಹಿಂದೆ ಜಾರಿಯಲ್ಲಿದ್ದ ತಳವಾರ, ಕುಳವಾಡಿ ಮತ್ತು ಶಾನುಭೋಗ ಹುದ್ದೆಗಳು ವಂಶಪಾರಂಪರ್ಯವಾದ ಹುದ್ದೆಗಳೆ?

ಆ) ಹಾಗಿದ್ದಲ್ಲಿ ಈ ಹುದ್ದೆಗಳಿಗೆ ನೇಮಕ ಮಾಡುವಾಗ ಲಿಂಗ ಭೇದವನ್ನು ಪರಿಗಣಿಸಲಾಗುತ್ತಿತ್ತೇ ?

ಇ) ಹಾಗಿದ್ದಲ್ಲಿ, ಅದಕ್ಕೆ ಕಾರಣಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) (i) ಈ ಹಿಂದೆ ರಾಜ್ಯದ್ದಲ್ಲಿದ್ದ ತಳವಾರ ಮತ್ತು ಶ್ಯಾನುಭೋಗ ಹುದ್ದೆಗಳು ವಂಶ ಪಾರಂಪರ್ಯ ಮತ್ತು ವಂಶಪಾರಂಪರ್ಯವಲ್ಲದ (ಸ್ಟೈಫೆಂಡರಿ) ಎರಡೂ ಹುದ್ದೆಗಳೂ ಇದ್ದವು.

(ii) ಕುಳವಾಡಿಗಳ ಹುದ್ದೆಗಳು ಕೊಡಗು ಜಿಲ್ಲೆಯಲ್ಲಿ ಮಾತ್ರ ಅಸ್ತಿತ್ವದಲ್ಲಿದ್ದವು.

ಆ) ಸಂಬಂಧಪಟ್ಟ ಕಾಯ್ದೆ ಹಾಗೂ ರೂಢಿಯಲ್ಲಿ ಈ ಹುದ್ದೆಗಳಿಗೆ ಗಂಡಸರನ್ನೇ ನೇಮಕ ಮಾಡಲಾಗುತ್ತಿತ್ತು.

ಇ) ಮೇಲೆ ಕೊಟ್ಟ 'ಆ' ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಅಭಾವ ಪರಿಹಾರ ಕಾಮಗಾರಿಗಳಿಗೆ ಖರ್ಚಾಗಿರುವ ಹಣದ ಬಗ್ಗೆ

೧೦೯ (೨೪) ಶ್ರೀ ಕೆ. ಹೆಚ್. ಪಾಟೀಲ್ (ಗದಗ) :—ಮಾನ್ಯ ಕಂದಾಯ, ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

ಅ) ಅಭಾವ ಪರಿಹಾರ ಕಾಮಗಾರಿಗಳಿಗೆ ಇದುವರೆವಿಗೂ ಖರ್ಚಾಗಿರುವ ಒಟ್ಟು ಹಣವೆಷ್ಟು ? (ಜಿಲ್ಲಾವಾರು ಮತ್ತು ಬಾಬ್ತುವಾರು ವಿವರ ನೀಡುವುದು)

ಆ) ಕೇಂದ್ರ ಸರ್ಕಾರದಿಂದ ಬಂದಿರುವ ಒಟ್ಟು ಹಣ ಮತ್ತು ಖರ್ಚಾದ ಒಟ್ಟು ಹಣವೆಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯಮಂತ್ರಿಗಳು).—

ಅ) ೧೯೮೫–೮೬ನೇ ಸಾಲಿನಲ್ಲಿ ಅಭಾವ ಪರಿಹಾರ ಶೀರ್ಷಿಕೆಯಡಿಯಲ್ಲಿ ಒಟ್ಟು ೭೬.೧೪ ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ. ಹಾಗೂ ೧೯೮೬–೮೭ನೇ ಸಾಲಿನಲ್ಲಿ (ಏಪ್ರಿಲ್ ೧ ರಿಂದ ಜೂನ್ ೩೦ ಅಂತ್ಯದವರೆವಿಗೆ) ೪೩.೫೬ ಕೋಟಿ ರೂ, ಖರ್ಚು ಮಾಡಲಾಗಿದೆ. ವಿವರಗಳನ್ನು ಈ ಉತ್ತರಕ್ಕೆ ಲಗತ್ತಿಸಿರುವ ತಃಖ್ತೆಯಲ್ಲಿ ನೀಡಲಾಗಿದೆ.

ಆ) ಕೇಂದ್ರ ಸರ್ಕಾರವು ಅಭಾವ ಪರಿಹಾರ ಖರ್ಚಿನ ನಿಗಧಿತ ಮಿತಿಯನ್ನು ೧೯೮೫–೮೬ನೇ ಸಾಲಿಗೆ ೬೨.೪೬ ಕೋಟಿ ರೂ.ಗಳಿಗೆ ನಿಗಧಿಪಡಿಸಿದ್ದು, ಸದರಿ ಪೂರಾ ಹಣವನ್ನು ಪರಿಹಾರ ಕಾಮಗಾರಿಗಳಿಗೆ ಖರ್ಚು ಮಾಡಲಾಗಿದೆ. ಅದೇ ರೀತಿ ೧೯೮೬–೮೭ನೇ ಸಾಲಿಗೆ ೫೦.೦೦ ಕೋಟಿ ರೂ. ಗಳ ನಿಗಧಿತ ಖರ್ಚನ್ನು ನಿಗದಿ ಪಡಿಸಿದ್ದು, ಜೂನ್ ಅಂತ್ಯದವರೆಗೆ ೪೩.೫೬ ಕೋಟಿ ರೂ. ಗಳು ಖರ್ಚು ಮಾಡಲಾಗಿದ್ದು, ಉಳಿದ ೮.೯೬ ಕೋಟಿ ರೂ. ಗಳನ್ನು ಅಂದರೆ (i) ರಿಗ್‌ಗಳನ್ನು (ರೂ. ೭.೫೦ ಕೋಟಿ) ಖರೀದಿಸುವುದಕ್ಕೋಸ್ಕರ ಮತ್ತು (ii) ೧.೪೬ ಕೋಟಿ ರೂ. ಗಳನ್ನು ಬೆಳೆಗಳ ಸಾಲ ಮರು ಹೊಂದಾಣಿಕೆಗಾಗಿ ಸೆಪ್ಟೆಂಬರ್ ತಿಂಗಳವರೆವಿಗೆ ಅವಧಿಯನ್ನು ವಿಸ್ತರಿಸಿದೆ.